ಅಂಗನವಾಡಿ ಕಾರ್ಯಕರ್ತೆಯರನ್ನು ಮುಖ್ಯಸೇವಿಕ ಮೇಲ್ವಿಚಾರಕಿ ಮತ್ತು ಶಿಕ್ಷಕರ ಹುದ್ದೆಗೆ ನೇಮಕ.

3770 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅಂಗನವಾಡಿ ಕಾರ್ಯಕರ್ತೆಯರನ್ನು ಮುಖ್ಯಸೇವಿಕೆಯರ, ಗ್ರಾಮಸೇವಕೆಯರ ಮತ್ತು ಪ್ರಾಥಮಿಕ ಶಿಕ್ಷಕಿಯರ ಹುದ್ದೆಗೆ ನೇರ ನೇಮಕಾತಿ ಮಾಡುವುದರಲ್ಲಿ ಸರ್ಕಾರಕ್ಕೆ ಇರುವ ತೊಂದರೆಯೇನು?

ಆ) ಮಹಾರಾಷ್ಟ್ರ ಸರ್ಕಾರದಲ್ಲಿ ಇದರ ಬಗ್ಗೆ ಆದೇಶ ಇರುವುದರಿಂದ ನಮ್ಮ ಸರ್ಕಾರ ಇದನ್ನು ಅನುಸರಿಸಲು ಇರುವ ತೊಂದರೆಯೇನು?

ಇ) 17 ವರ್ಷಗಳಿಂದ ಅನುಭವ ಪಡೆದ ಅಂಗನವಾಡಿ ಕಾರ್ಯಕರ್ತೆಯವರಿಗೆ ಸಹಾಯ ಮಾಡಿದಂತೆ ಆಗುವುದಿಲ್ಲವೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಮುಖ್ಯಸೇವಿಕಾ ಮೇಲ್ವಿಚಾರಕಿಯರಿಗೆ ಶೇಕಡ 75ರಷ್ಟು ಹುದ್ದೆಗಳನ್ನು ನೇರ ನೇಮಕಾತಿಗಳಿಗಾಗಿ ನಿಗದಿ ಪಡಿಸಲಾಗಿದೆ. ನೇರ ನೇಮಕಾತಿಗಳಿಗಾಗಿ ಎಸ್.ಎಸ್.ಎಲ್.ಸಿ. ಪಾಸಾದ 10 ವರ್ಷ ಅಂಗನವಾಡಿ ಕಾರ್ಯಕರ್ತೆಯರಾಗಿ ಸೇವೆಸಲ್ಲಿಸಿದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. 10 ವರ್ಷ ಅಂಗನವಾಡಿ ಕಾರ್ಯಕರ್ತೆಯರೆಂದು ಸೇವೆ ಸಲ್ಲಿಸಿದವರಿಗೆ ನೇಮಕಾತಿಯಲ್ಲಿ ಆದ್ಯತೆ ಕೊಡಲಾಗುತ್ತದೆ. ಅಂಗನವಾಡಿ ಕಾರ್ಯಕರ್ತೆಯರೆಂದು ಸೇವೆ ಸಲ್ಲಿಸಿರುವ ಗರಿಷ್ಟ 15 ವರ್ಷ ಸೇವೆ ಮತ್ತು ವಯೋಮಿತಿ 45 ವರ್ಷಗಳವರೆಗೆ ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವಯೋಮಿತಿಯನ್ನು ಸಡಿಲಗೊಳಿಸಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಬಗ್ಗೆ ಶಿಕ್ಷಣ ಇಲಾಖೆಯೊಡನೆ ಸಮಾಲೋಚಿಸಲಾಗುತ್ತಿದೆ.

ಆ) ಸರ್ಕಾರಕ್ಕೆ ಮಹಾರಾಷ್ಟ್ರ ಸರ್ಕಾರದ ಆದೇಶದ ಬಗ್ಗೆ ಮಾಹಿತಿ ಇಲ್ಲ.

ಇ) ಇದು ಅನ್ವಯಿಸುವುದಿಲ್ಲ.

ಕಟುಕ ಜನಾಂಗದವರ ಸಂಖ್ಯೆ.

3771 - ಶ್ರಿಯುತರಾದ ಚೌಡಾರೆಡ್ಡಿ (ಚಿಂತಾಮಣಿ), ಬಿ. ಸ್ವಾಮಿರಾವ್ (ಹೊಸನಗರ), ನಾರಾಯಣರಾವ್‌ಮನಹಳ್ಳಿ (ಬೀದರ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕಟಿಕರು ಅಥವಾ ಕಟುಕರ ಜನಸಂಖ್ಯೆ ಎಷ್ಟು?

ಆ) ಇವರು ಸಾಮಾಜಿಕವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ರಾಜಕೀಯವಾಗಿ ಅತ್ಯಂತ ಹಿಂದುಳಿದಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಜನಾಂಗದವರು ತಮ್ಮನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಹೋರಾಟ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದ ಧೋರಣೆ ಏನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) 2ನೇ ಹಿಂದುಳಿದ ವರ್ಗಗಳ ಆಯೋಗದ ವರದಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಕಾಟಿಕ್/ಕಟುಕರ ಜನ ಸಂಖ್ಯೆ 60,586 ಎಂದು ನಮೂದಿಸಲಾಗಿದೆ.

ಆ) ಹೌದು-ಸರ್ಕಾರಿ ಆದೇಶ ಸಂಖ್ಯೆ : ಸಕಕಾ 86 ಬಿಸಿಎ 86 ದಿನಾಂಕ 13-10-86ರ ಪ್ರಕಾರ ಸದರೀ ಜನಾಂಗವನ್ನು ಇತರೆ ಓಮುಳಿದ ವರ್ಗಗಳ 'ಬಿ' ಗುಂಪಿನಲ್ಲಿ ಸೇರಿಸಲಾಗಿದೆ.

ಇ) ಹೌದು.

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸುವಂತೆ ಕೋರಿ ಹಲವಾರು ಜನಾಂಗದವರು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಲು ಸರ್ಕಾರ ತನ್ನ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 126 ಎಸ್‌ಎಡಿ 88 ದಿನಾಂಕ 5-1-1991ರಲ್ಲಿ ರಚಿಸಿರುವ ಸಮಿತಿಯ ಮುಂದೆ ಕಟುಕ ಜನಾಂದವರ ಬೇಡಿಕೆಯನ್ನು ಸಹ ಇಡಲಾಗಿದೆ.

ಪ್ರಕೃತಿ ಚಿಕಿತ್ಸಾ ಕಾಲೇಜು ತೆರೆಯುವ ಬಗ್ಗೆ.

3730 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಆಯುರ್ವೇದ ಹೋಮಿಯೋಪತಿ, ಯುನಾನಿ ಸರ್ಕಾರಿ ಕಾಲೇಜುಗಳಿದ್ದು, ಪೂರ್ಣ ಪ್ರಮಾಣದ ಪ್ರಕೃತಿ ಮತ್ತು ಯೋಗ ಕಾಲೇಜನ್ನು ಇಲ್ಲಿಯವರೆಗೆ ಏಕೆ ಸ್ಥಾಪಿಸಿಲ್ಲ?

ಆ) ಈಗ ಅದರ ಸ್ಥಾಪನೆಯು ಯಾವ ಹಂತದಲ್ಲಿದೆ?

ಇ) ಯಾವ ವರ್ಷ ಈ ಕಾಲೇಜನ್ನು ಸ್ಥಾಪಿಸಲಾಗುವುದು?

ಈ) ರಾಜ್ಯದಲ್ಲಿ ಎಷ್ಟು ಜನ ಪ್ರಕೃತಿ ಚಿಕಿತ್ಸಕ ವೈದ್ಯರಿದ್ದಾರೆ?

ಉ) ಮೈಸೂರು ಮತ್ತು ಬೆಂಗಳೂರಿನ ಯಾವ ಯಾವ ಬಡಾವಣೆಗಳಲ್ಲಿ ಎಷ್ಟೆಷ್ಟು ಪ್ರಕೃತಿ ಚಿಕಿತ್ಸಾ ಶಿಬಿರಗಳು ನಡೆದಿವೆ? ಇತರೆ ಜಿಲ್ಲೆಗಳಲ್ಲಿ ಏಕೆ ಮಾಡಿಲ್ಲ?

ಊ) ಔಷಧಿ ತಯಾರಕರು, ವಿತರಕರು ಸಂಬಂಧಪಟ್ಟ ಜಾಹೀರಾತುಗಳು ಪ್ರಕೃತಿ ಚಿಕಿತ್ಸೆಯಲ್ಲಿ ಇವೆಯೆ?

ಋ) ಇಲ್ಲದಿದ್ದರೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಮತ್ತು ವ್ಯಾಪಕವಾಗಿ ಪ್ರಚಾರ ಮಾಡಲು ಪ್ರತಿ ಜಿಲ್ಲೆಯಲ್ಲೂ ಪ್ರಚಾರವನ್ನು ಏಕೆ ನೇಮಿಸಬಾರದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಪ್ರಕೃತಿ ಚಿಕಿತ್ಸಾ ಡಿಪ್ಲೋಮಾ ಕಾಲೇಜು ಸದ್ಯಕ್ಕೆ ಮೈಸೂರಿನ ಸರ್ಕಾರಿ ಭಾರತೀಯ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡದಲ್ಲಿ ನಡೆಯುತ್ತಿದ್ದು ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಪ್ರಾಥಮಿಕವಾಗಿ ಅಗತ್ಯ ಕಟ್ಟಡ ಸೌಲಭ್ಯ, ಭೋದಕ ಸಿಬ್ಬಂದಿ ಇತ್ಯಾದಿ ಸೌಲಭ್ಯಗಳು ಬೇಕಾಗುತ್ತದೆ. ಅಲ್ಲದೆ ಯೋಜನೆಯಡಿಯಲ್ಲಿ ಅಗತ್ಯ ಹೆಚ್ಚಿನ ಆಯವ್ಯಯವು ಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಸದರಿ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಪ್ರಾರಂಭಿಸಲು ಈ ವರೆಗೆ ಕ್ರಮಕೈಗೊಂಡಿರಲಿಲ್ಲ.

ಆ) ಮೇಲೆ (ಅ) ಕ್ಕೆ ಕೊಟ್ಟ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ಈ ಪ್ರಸ್ತಾವನೆ ಮಂಜೂರಾತಿ ಪಡೆದಲ್ಲಿ ಸದರಿ ಮಹಾವಿದ್ಯಾಲಯವನ್ನು 1992-93ನೇ ಆರ್ಥಿಕ ವರ್ಷದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ಮೈಸೂರಿನ ಪ್ರಕೃತಿ ಚಿಕಿತ್ಸೆ ಡಿಪ್ಲೊಮಾ ಮಹಾವಿದ್ಯಾಲಯದಿಂದ ಇದುವರೆವಿಗೂ 23 ವೈದ್ಯರುಗಳು ಡಿಪ್ಲೊಮಾ ಪದವಿ ಪಡೆದಿರುತ್ತಾರೆ. ಅಲ್ಲದೆ ಹೈದರಾಬಾದಿನ ಗಾಂಧಿ ಪ್ರಕೃತಿ ಚಿಕಿತ್ಸಾ ಮಹಾ ವಿದ್ಯಾಲಯದಿಂದ ಕರ್ನಾಟಕದ ಕೆಲವರು ಪದವಿ ಪಡೆದಿರುತ್ತಾರೆ. ಆದರೆ ಅವರ ಸಂಖ್ಯೆ ಬಗ್ಗೆ ವಿವರಗಳು ದೊರೆಯುತ್ತಿಲ್ಲ.